'ಚಲೊ ಆತು ಬಿಡು ನೀ ಬಂದಿದ್ದು.'

'ನಿಮ್ಗೆ ಆ ದೇವಸ್ಥಾನದಾಗ ಅಮಾವಾಸ್ಯೆಯಿಂದ ಬಿದಿರುಮೆಳೆ ಸೇವೆ ಮಾಡ್ಬೇಕು ಅಂತೇಳಿ ಯಾರ್ ಹೇಳಿದ್ರು?' 'ಅದೇ ಸೀತವ್ವ ಮತ್ತು ಮಲ್ಲವ್ವ ಇಬ್ರೂ ಹೊಟ್ಟೀಲೆ ಆಗಿದ್ದು ಆ ಪೂಜಾರೆಪ್ಪ ಹೇಳಿದ್ದ ಮಾತಿನಿಂದ, ಗುಡಿಯಾಗ ಅಮಾಸಿ ದಿನದಿಂದ ಒಂದು ವಾರ ಬಿದಿರುಮೆಳೆ ಸೇವೆ ಮಾಡಿದ್ಕಾ. ನಿನಗ ಗೊತ್ತಿಲ್ಲೇನು? ದೇವರು ಬಾಳ ಶಕ್ತಿವಂತ ಅದಾನ. ಪೂಜಾರೆಪ್ಪನ ಮೈಯಾಗ ದೇವರು ಬಂದು ಕಾರ್ಣಿಕ ಹೇಳ್ದೆ ಇದ್ದಿದ್ರ ಮಕ್ಳ ಕಾಣ್ತಿದ್ದಿಲ್ಲ. ಪೂಜಾರೆಪ್ಪನೇ ನಮ್ ಪಾಲಿನ ದೇವರು.' 'ಮಕ್ಕಳ ಭಾಗ್ಯ ದೊಡ್ಡು ಕಣವ್ವ. ಹುಷಾರಾಗಿರು. ನಾನು ಪೂಜಾರೆಪ್ಪನ ಮನಿಗೆ ಹೋಗಿ ವಿಚಾರಿಸಿಕೊಂಡು ಬರ್ತಿನಿ' ಅಂತೇಳಿ ಅತ್ತಿ-ಸೊಸೆ ಪೂಜಾರೆಪ್ಪನ ಮನಿಗೆ ಹೋಗ್ತಾರ.

ಪೂಜಾರೆಪ್ಪ ಪೂಜಾರೆಪ್ಪ... ಅಂತ ನೀಲವ್ವ ಕೂಗಾಕ ಚಾಲೂ ಮಾಡ್ತಾಳೆ. 'ಆಹಾ! ಎಂತ ಸುಮಧುರ ಧ್ವನಿ. ಧ್ವನಿಯಲ್ಲೇ ಇಷ್ಟೊಂದು ಮತ್ತಿದೆ...' ಅಂತ ಮನ್ಸಲ್ಲಿ ಅನ್ಕೊಳ್ತಿದ್ದ ಪೂಜಾರೆಪ್ಪ, 'ಬಂದೆ ಯಾರದು' ಅನ್ಕೊಂಡು ಹೊರಗಡೆ ಬರ್‍ತಾನೆ. ನೀಲವ್ವ ಮತ್ತು ಕಾಳವ್ವನ್ನ ನೋಡಿದ್ದೆ, 'ಒಹೊ ಏನು ಕಾಳವ್ವಕ್ಕ ಸವಾರಿ ನಮ್ ಮನಿ ಕಡೆವರೆಗೂ ಬಂದೇತಿ?' ಅಂದ.

ಪೂಜಾರೆಪ್ಪ ಅಂತ ನಮಸ್ಕಾರ ಮಾಡ್ತಾಳೆ. ಏ ಬ್ಯಾಡ ಬ್ಯಾಡ ಅನ್ಕೊತಾನೆ ನಮಸ್ಕಾರ ಮಾಡಿಸಿಕೊಳ್ತಾನೆ ಪೂಜಾರೆಪ್ಪ. 'ನಮ್ ಊರಾಗ ಮದ್ವೆ ಆಗಿ ಹತ್ತು ಹನ್ನೆರೆಡು ವರ್ಷ ಆದ್ರೂ ಮಕ್ಕಳಾಗ್ದೇ ಇದ್ದ ಮೂರು ನಾಲ್ಕು ಜನ ಹೆಣ್ಣುಮಕ್ಕಳಿಗೆ ಮಕ್ಕಳ ಭಾಗ್ಯ ಸಿಗೊ ಹಾಗೆ ನೀನೆ ಉತ್ತರ ಕೊಡ್ಸಿದಿ. ಹಂಗ ನನ್ನ ಸೊಸಿ ಕಾಳವ್ವನ ಮದುವ್ಯಾಗಿ ಹನ್ನೆರೆಡು ತುಂಬಿ ಹದಿಮೂರಕ್ಕ ಬಿತ್ತು. ನೀನೆ ದಾರಿ ತೋರಿಸ್ಬೇಕು' ಅಂದಾಗ ಪೂಜಾರೆಪ್ಪ ಮೈತುಂಬಿ, 'ಮುಂದಿನ ವರ್ಷದಾಗ ನಿಮ್ಮನ್ಯಾಗ ತೊಟ್ಟಿಲು ಕಟ್ತಿರಿ. ಆದ್ರ ಗುಡ್ಡದ ಮೇಲಿರೊ ದೇವಸ್ಥಾನದಾಗ ಈ ಅಮವಾಸಿಯಿಂದ ಆಕಿ ಅಲ್ಲೆ ದೇವಸ್ಥಾನದ ಛಾವಡಿನ್ಯಾಗಿದ್ದು ದೇವರ ಬಿದಿರುಮೆಳೆ ಸೇವೆ ಮಾಡ್ಬೇಕಾಕ್ಕೇತಿ. ಇದು ಕಾಳವ್ವನ ಕಡೆ ಇಂದ ಆಕ್ಕೇತೆನು?' ಎಂದು ಪೂಜಾರೆಪ್ಪ ಕೇಳ್ತಾನ. ಆಗ ರಾಮವ್ವ, 'ಎಂತ ಕಷ್ಟ ಬಂದ್ರು ನನ್ನ ಸೊಸಿ ಮಕ್ಕಳ ಸಲುವಾಗಿ ಈ ಅಮಾಸಿ ಇಂದನೇ ಗುಡ್ಡದ ಮ್ಯಾಲಿನ ದೇವಸ್ಥಾನದಲ್ಲಿದ್ದು ದೇವರ ಬಿದಿರುಮೆಳೆ ಸೇವೆ ಮಾಡ್ತಾಳ' ಅಂತೇಳಿ 'ನಾಡಿದ್ದೇ ಅಮಾಸಿ ಇರೋದ್ರಿಂದ ನಾ ಮಂಗಳವಾರದಿಂದ ಗುಡ್ಡದ ಮ್ಯಾಲಿರೋ ದೇವಸ್ಥಾನಕ್ಕೆ ಕಳಸ್ತಿನಿ' ಅಂತೇಳಿ ಮನಿಗೆ ಬರ್ತಾಳ. ಆಗ ಮನಿಗೋಗಿ ಕಾಳವ್ವನ್ನ ಗುಡ್ಡದ ಮ್ಯಾಲಿರೋ ದೇವಸ್ಥಾನಕ್ಕೆ ಕಳಿಸೋಕೆ ತಯಾರಿ ಮಾಡ್ತಾಳ. 'ಹೆದರಬ್ಯಾಡ, ಪೂಜಾರೆಪ್ಪ ಹೇಳ್ಯಾನ, ಯಾರೊ ಬಂದಂಗ ಆಕ್ಕೇತಿ ಪಕ್ಕ ಕೂತಂಗ ಆಕ್ಕೇತಿ ಅಂತ. ನೀ ಆ ಸಮಯದಲ್ಲಿ ಸುಮ್ನೆ ದೇವರನ್ನ ನೆನಪಿಸಿಕೊಂಡು ಮಲ್ಕೊ' ಅಂತ ಮರುದಿನ ಬೆಳಗ್ಗೆ ಕಾಳವ್ವನ್ನ ರಾಮವ್ವ ದೇವಸ್ಥಾನಕ್ಕೆ ಕಳಿಸ್ತಾಳ.

ಗುಡಿ ಛಾವಡಿಗೆ ಹೋಗಾಕ ಹತ್ತಿ ಹದಿನೈದು ದಿನ ಆಗಿತ್ತು. ಕಾಳವ್ವಗ ಒಳಗೊಳಗ ಭಯ ಯಾರ ಹತ್ರ ಹೇಳಿಕೊಳ್ಳೊದು ಅಂತೇಳಿ ನಿಂಗವ್ವನ ಮನಿ ದಾರಿ ಹಿಡಿದಿದ್ಲು. 'ಅಕ್ಕ ಬೇ, ಏನ್ ಮಾಡಕತ್ತಿ?' ಅಂತ ಕೇಳೊಷ್ಟೊತ್ತಿಗೆ 'ಬಾ, ಕಾಳವ್ವ ಆರಾಮಿದಿಯಾ?' ಅಂತ ಮಾತಾಡಾಕ ಚಾಲೂ ಮಾಡಿದ್ಲು. 'ಅದು ಯಕ್ಕ ಗುಡ್ಡದ ಮ್ಯಾಲಿರೋ ದೇವಸ್ಥಾನದ ಛಾವಡಿಯೊಳಗ ರಾತ್ರಿ ಮಕ್ಕೊಂಡಾಗ ಯಾರೊ ಬಂದು ನನ್ನ ಮುಟ್ಟಿದಂಗ ಆಗುತ್ತ, ಮೇಲ್ಕ ಬಂದು ಕೈ ಮೈ ಸವರಿದಂಗ ಆಗುತ್ತ ಜೊತಿಗೆ ಕುಂತಂಗ ಆಗುತ್ತ. ಮೈ ಮ್ಯಾಲೆ ಬಂದಂಗ ಆಕ್ಕೇತಿ, ಗಟ್ಟಿಯಾಗಿ ತಬ್ಕೊಂಡಂಗೆ ಆಕ್ಕೇತಿ, ಭಯ ಆಗುತ್ತ ನಿಂಗವ್ವಕ್ಕ ನಿನ್ಗೂ ಹಿಂಗೇ ಆಗ್ತಿತ್ತಾ?'

'ಅಯ್ಯ ಅಲ್ಲಿ ಯಾವ ಮನಿ ಆದಾವು ಬರಾಕಾದ್ರು? ಹೆದರಿಕೆ ಆಗಾಕ ಅಲ್ಲಿ ದೇವರನ್ನ ಬಿಟ್ರು ಯಾರೂ ಇರಂಗಿಲ್ಲ. ಹಂಗೆಲ್ಲ ಹೆದರ್‍ಕೊಬೇಡ. ಗುಡಿಯಾಗ ನಿನ್ ಕಾಪಾಡೋದು, ಕಾಯೋದು ಎಲ್ಲ ದೇವರ ಕೆಲಸ. ಅದು ದೇವರೆ ಬಂದಿರುತ್ತ ನಿನ್ ಜೊತೆ ಕುತ್ಕೊಳಾಕ. ಹೆದರ್‍ಕೊಬ್ಯಾಡ. ನನ್ಗು ಹಿಂಗಾ ಅಕ್ಕಿತ್ತು. ನನಗ ಆ ರೇಣಕವ್ವ ಹೇಳಿದ್ಲು ಮೊದಲೇ, ಹಿಂಗಾಗುತ್ತಾ ಹೆದರ್‍ಕೊಬ್ಯಾಡ ಅಂತ. ಹೋಗು ಭಕ್ತಿಲಿ ಹಗಲು ರಾತ್ರಿ ದೇವರ ಗುಡಿಯಾಗಿರು. ಆ ಸ್ವಾಮಿ ನಿನಗೆ ಒಳ್ಳೇದೆ ಮಾಡ್ತಾನ...' ಅಂತೇಳಿ ಕಳಿಸಿದ್ಲು. ಬಿದಿರುಮೆಳೆ ಸೇವೆ ಮಾಡಿ ಬಂದ ಕಾಳವ್ವ ಅಸಲಿಗೆ ಬಳಲಿದ್ಲು. ಸುಸ್ತಿಗೆ ನಿದ್ದೆ ಆಗಿಲ್ಲ, ಹಂಗಂತ ಹೇಳಂಗಿರಲಿಲ್ಲ, ಯಾಕ್ ಅಂದ್ರ ದೇವರು ಕೋಪ ಮಾಡ್ಕೊಂಡ್ರೆ ಅಂತ.

ಹಿಂಗ ದಿನಗಳು ಉರುಳಿದ್ವು ಒಂದು ತಿಂಗಳಾತು,